ಅಸಲು ದಾವಾ ಸಂಖ್ಯೆ - 129/2010
ಪಿಡಬ್ಲ್ಯೂ - 01
ದಿನಾಂಕಃ 27-06-2018
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲುಃ ಶ್ರೀ ಎಸ್ ಎ ಕೆ ಪ್ರತಿವಾದಿ ಪರ ವಕೀಲರಿಂದ.

ದಾವಾ ಆಸ್ತಿಗಳು ಪಕ್ಕಿರಪ್ಪನ ಆಸ್ತಿ ಇರುತ್ತವೆ ಎಂದರೆ ಸರಿ. ಫಕ್ಕಿರಪ್ಪ ಯಾವ ಇಸ್ವಿಯಲ್ಲಿ ಮೃತನಾಗಿರುತ್ತಾನೆ ಎಂದು ನನಗೆ ಗೊತ್ತಿರುವುದಿಲ್ಲ. 30-40 ವರ್ಷಗಳ ಹಿಂದೆ ಫಕ್ಕಿರಪ್ಪ ಮೃತಪಟ್ಟಿರುತ್ತಾನೆ. ನಮ್ಮ ತಂದೆಯವರಾದ ಸೋಮಲಪ್ಪ ಇವರು ಮೃತಪಟ್ಟಾಗ ನಾನು 5-6 ವರ್ಷಗಳ ವಯಸ್ಸಿನವಳಿದ್ದೆ. ಈಗ ನನಗೆ 49 ವರ್ಷ ವಯಸ್ಸು ಇರುತ್ತದೆ. ಫಕ್ಕಿರಪ್ಪ ಮೃತಪಟ್ಟಾಗ ನಾನು 2 ವರ್ಷದವಳಾಗಿದ್ದೆ. ದಾವಾ ಆಸ್ತಿಗಳು ನಮ್ಮ ಅಜ್ಜನ ಹೆಸರಿನಲ್ಲಿದ್ದರು ಎಂದು ತೋರಿಸಲು ನಾನು ಕಾಗದ ಪತ್ರಗಳನ್ನು ಈದಾವೆಯಲ್ಲಿ ಹಾಜರುಪಡಿಸಿರುತ್ತೇನೆ ನಮ್ಮ ಅಜ್ಜ ಮೃತಪಟ್ಟಾಗ ದಾವಾ ಆಸ್ತಿಗಳಿಗೆ ನಮ್ಮ ಅಣ್ಣನ ಹೆಸರು ದಾಖಲಾಗಿರುತ್ತವೆ. ದಾವಾ ಆಸ್ತಿಗಳು ಹಿರಿಯರ ಆಸ್ತಿಗಳು ಇರುವುದಿಲ್ಲ ಎಂದರೆ ಸರಿಯಲ್ಲ. ಫಕ್ಕಿರಪ್ಪನು ಸೋಮಲಪ್ಪನನ್ನು ನೋಡಿಕೊಂಡ (ಸಾಕಿದ) ಕಾರಣ ದಾವಾ ಆಸ್ತಿಗಳು ಸೋಮಲಪ್ಪನಿಗೆ ಬಂದಿರುತ್ತವೆ ಎಂದರೆ ಸರಿಯಲ್ಲ.

ದಾವಾ ಆಸ್ತಿಗಳ ಬೆಲೆಯನ್ನು ನಿಮ್ಮ ವಾದ ಪತ್ರದಲ್ಲಿ ನೀವು ಹೇಳಿ ಬರೆಸಿರುವಿರಾ ಎಂದರೆ ದಾವಾ ಆಸ್ತಿಗಳ ಮಾರುಕಟ್ಟೆಯ ಬೆಲೆಯು 3-4 ಲಕ್ಷಗಳು ಆಗಿರುತ್ತವೆ. ದಾವಾ ಆಸ್ತಿಯು ಒಂದು ಎಕರೆಗೆ 2-3 ಲಕ್ಷ ರೂಗಳು ಮಾರುಕಟ್ಟೆ ಬೆಲೆ ಆಗುತ್ತದೆ. ನನ್ನ ಮದುವೆಯನ್ನು ನನ್ನ ತಾಯಿಯವರು ಮಾಡಿರುತ್ತಾರೆ. ನನ್ನ ಮದುವೆಯ ಸಮಯದಲ್ಲಿ ನನ್ನ ತಂದೆಯವರು ಜೀವಂತ ಇರಲಿಲ್ಲ ಎಂದರೆ ಸರಿ. ಎಷ್ಟು ವರ್ಷಗಳ ಹಿಂದೆ ನನ್ನ ಮದುವೆ ಆಗಿರುತ್ತದೆ ಎಂದು ನನಗೆ ಹೇಳಲು ಬರುವುದಿಲ್ಲ. ನನ್ನ ಮಗನ ವಯಸ್ಸು 30 ವರ್ಷ ಇರುತ್ತದೆ. ನನ್ನ ಮಗನ ಮದುವೆ ಆಗಿರುತ್ತದೆ. ನನ್ನ ಮಗನ ಮದುವೆ ಆಗಿ 10 ವರ್ಷ ಆಗಿರುತ್ತದೆ. ನನ್ನ ಮಗನ ಹೆಂಡತಿಯ ಹೆಸರು ಹೂವಕ್ಕ ಇರುತ್ತದೆ.

ನಾಗವ್ವ ನನ್ನ ಅಕ್ಕನ ಸೊಸೆ ಇರುತ್ತಾಳೆ. ನಾಗವ್ವನ ಮದುವೆ ಆಗಿರುತ್ತದೆ. ನಾಗವ್ವನನ್ನು ನಾಗಪ್ಪ ಲಮಾಣಿಗೆ ಮದುವೆ ಮಾಡಿ ಕೊಟ್ಟಿರುತ್ತಾರೆ. ನಾಗಪ್ಪನ ಮದುವೆಯಲ್ಲಿ ನಾನು ಹಾಜರು ಇದ್ದೆ. ನನಗೆ ಮದುವೆಯಲ್ಲಿ ಕೊಡುವ ಮತ್ತು ತೆಗೆದುಕೊಳ್ಳುವ ಸಮಯದಲ್ಲಿ ನಾನು ಹಾಜರು ಇದ್ದೆ. ಈ ಪ್ರಸ್ತುತ ದಾವೆಯನ್ನು ದಾಖಲಿಸುವ ಪೂರ್ವದಲ್ಲಿ ನಾಗಪ್ಪನ ಮದುವೆ ಆಗಿ 4 ವರ್ಷ ಆಗಿತ್ತು. 3 ನೇ ಪ್ರತಿವಾದಿಯ ವಿಳಾಸವನ್ನು ನಾನು ಹೇಳಿ ಬರೆಸಿರುವುದಿಲ್ಲ.

ನಾಗವ್ವ ಇವಳು ಜೀವನಾಂಶ ಕೋರಿ ಇದೇ ನ್ಯಾಯಾಲಯದಲ್ಲಿ ಸಲ್ಲಿಸಿರಬಹುದು ಎಂದು ನುಡಿಯುತ್ತಾರೆ. ನಾಗಪ್ಪನು ನಾಗವ್ವಳಿಗೆ ಪ್ರತಿ ತಿಂಗಳು ಜೀವನಾಂಶ ಕೊಡಬೇಕು ಎಂದು ನ್ಯಾಯಾಲಯದಿಂದ ಆದೇಶ ಆಗಿರುತ್ತದೆ ಎಂದರೆ ಸರಿ. ಆದೇಶ ಪ್ರಕಾರ ನಾಗಪ್ಪನು ನಾಗವ್ವಳಿಗೆ ಜೀವನಾಂಶವನ್ನು ಪ್ರತಿ ತಿಂಗಳು ಸರಿಯಾಗಿ ನೀಡದಿರುವ ವಿಷಯ ನನಗೆ ಗೊತ್ತಿರುವುದಿಲ್ಲ. ಪ್ರತಿವಾದಿಯರು ಅವರ ಸ್ವಂತ ಪ್ಲಾಟನಲ್ಲಿ ಇರುತ್ತಾರೆ. ದಾವಾದ ಆಸ್ತಿಯ ಸರ್ವೆ ನಂ. 23 ಇರುತ್ತದೆ. ದಾವಾದ ಆಸ್ತಿಯ ಸರ್ವೆ ನಂಬರದಲ್ಲಿ ಪೋಟ ಹಿಸ್ಸಾ ಇರುವುದಿಲ್ಲ. ಇನ್ನೊಂದು ದಾವಾ ಆಸ್ತಿಯ ಸರ್ವೆ ನಂ. 27 ಇರುತ್ತದೆ ಪೋಟ ಹಿಸ್ಸಾ ಎಂದರೆ ನನಗೆ ಗೊತ್ತಾಗುವುದಿಲ್ಲ ಎಂದು ನುಡಿಯುತ್ತಾರೆ. ಪೋಟ ಹಿಸ್ಸಾ ಆಗಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಸರ್ವೆ ನಂ. 27/1, 27/2 ಮತ್ತು 27/3 ಇವು ನಮ್ಮ ಆಸ್ತಿಗಳು ಇರುತ್ತವೆ. ಸರ್ವೆ ನಂ. 27/1, 27/2 ಮತ್ತು 27/3 ಇವು ನಮ್ಮ ಅಜ್ಜನಿಂದ ಬಂದ

ಆಸ್ತಿಗಳು ಇರುತ್ತವೆ. ಸರ್ವೆ ನಂ. 27/1, 27/2 ಮತ್ತು 27/3 ಆಸ್ತಿಗಳು ದಾವಾ ಆಸ್ತಿಯನ್ನಾಗಿ ಈ ದಾವೆಯಲ್ಲಿ ತೋರಿಸಿರುತ್ತೇನೆ. ಸರ್ವೆ ನಂ. 27/1 ರಲ್ಲಿ ಒಟ್ಟು ಕ್ಷೇತ್ರ ಒಂಭತ್ತೂವರೆ ಎಕರೆ ಜಮೀನು ಇರುತ್ತದೆ ಸರ್ವೆ ನಂ. 27/2 ರಲ್ಲಿ ಒಟ್ಟು ಕ್ಷೇತ್ರ 4 ಎಕರೆ 8 ಗುಂಟೆ ಜಮೀನು ಇರುತ್ತದೆ. ಅದೇ ರೀತಿ ಸರ್ವೆ ನಂ. 27/3 ರಲ್ಲಿ ಎಷ್ಟು ಜಮೀನು ಇರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ.

ಸರ್ವೆ ನಂ. 27/1 ರ ಚಕಬಂದಿ ನನಗೆ ಹೇಳಲು ಬರುತ್ತದೆ. ಸಾಕ್ಷಿಯು ಮುಂದುವರೆದು ನನಗೆ ಚಕಬಂದಿ ಹೇಳಲು ಬರುವುದಿಲ್ಲ ನುಡಿಯುತ್ತಾರೆ. ಸರ್ವೆ ನಂ. 23/ಸಿ, 27/2, 27/3 ಮತ್ತು 27/4 ಆಸ್ತಿಗಳ ಚಕಬಂದಿ ನನಗೆ ಹೇಳಲು ಬರುವುದಿಲ್ಲ ಎಂದರೆ ಸರಿ. ನಾವು ಉದ್ದೇಶಪೂರ್ವಕವಾಗಿ ನಮ್ಮ ಅಜ್ಜನವರು 1956 ರ ಪೂರ್ವದಲ್ಲಿ ಮೃತಪಟ್ಟಿದ್ದರು ಸಹ ನನ್ನ ವಾದ ಪತ್ರದಲ್ಲಿ ದಿನಾಂಕವನ್ನು ತೋರಿಸಿರುವುದಿಲ್ಲ ಎಂದರೆ ಸರಿಯಲ್ಲ 4 ಮತ್ತು 6 ನೇ ಪ್ರತಿವಾದಿಯರು ಮನೆಗಳನ್ನು ಸರ್ಕಾರಿ ಜಮೀನುಗಳಲ್ಲಿ ಕಟ್ಟಿರುತ್ತಾರೆ. ನನ್ನ ಅಜ್ಜನವರ ಕಾಲದಿಂದ 4 ಮತ್ತು 6 ನೇ ಪ್ರತಿವಾದಿಗಳ ಮನೆಗಳು ಸರ್ಕಾರಿ ಜಮೀನುಗಳಲ್ಲಿ ಇರುತ್ತವೆ. 4 ಮತ್ತು 6 ನೇ ಪ್ರತಿವಾದಿಗಳ ಇರುವ ಮನೆಯು ಕೂಡ ನನ್ನ ಅಜ್ಜನ ಮನೆ ಇರುತ್ತದೆ. 4 ಮತ್ತು 6 ನೇ ಪ್ರತಿವಾದಿಗಳು ಇರುವ ಮನೆಯು ನನ್ನ ಅಜ್ಜನ ಹೆಸರಿನಲ್ಲಿ ದಾಖಲೆ ಇರುತ್ತದೆ.

ಈ ಹಂತದಲ್ಲಿ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂಡಾಧಿಕಾರಿಗಳು.ಸವಣೂರು.